ರಘು ಈ ಮಟ್ಟಕ್ಕೆ ಬೆಳೆದಿದ್ದು ಸಣ್ಣ ಸಾಧನೆಯಲ್ಲ. ಏಕೆಂದರೆ; ಕುಮಟಾ ಸಮೀಪದ ಪುಟ್ಟ ಹಳ್ಳಿಯಲ್ಲಿ ಜನಿಸಿದ್ದ ಹುಡುಗ ಕ್ರಿಕೆಟ್ ದಿಗ್ಗಜರೊಂದಿಗೆ ಗುರುತಿಸಿಕೊಳ್ಳುವ ಹಂತಕ್ಕೆ ಬೆಳೆದ ದಾರಿ ಕಡುಕಠಿಣ.

ಬಾಲ್ಯದಿಂದಲೂ ಕ್ರಿಕೆಟ್ ಹುಚ್ಚು. ಆದರೆ ಶಿಕ್ಷಕರಾಗಿದ್ದ ತಂದೆಗೆ ಮಗ ಹೆಚ್ಚು ಓದಬೇಕು ಎಂಬ ಆಸೆ ಇತ್ತು. ಆದರೆ ರಘುವಿನ ಛಲದ ಮುಂದೆ ಅವರೂ ಮನಸೋತರು. ಮಧ್ಯಮ ವರ್ಗದ ಹುಡುಗನಿಗೆ ಬಾನೆತ್ತರದ ಕನಸು. ದೊಡ್ಡ ಕ್ರಿಕೆಟಿಗನಾಗಬೇಕು ಎಂಬ ಛಲ. ಅದಕ್ಕಾಗಿಯೇ ಜೇಬಲ್ಲಿ ಪುಡಿಗಾಸಿನೊಂದಿಗೆ ಹುಬ್ಬಳ್ಳಿ ಬಸ್ ಹತ್ತಿದ್ದರು. ಬಿಡಿಕೆ ಕ್ರೀಡಾ ಪ್ರತಿಷ್ಠಾನ ಸೇರಿಕೊಂಡರು. ತಮ್ಮನ್ನು ಆಟಕ್ಕಷ್ಟೇ ಅಲ್ಲ, ಕ್ರಿಕೆಟ್‌ನ ಎಲ್ಲ ಕೆಲಸಗಳಿಗೂ ಸಮರ್ಪಿಸಿಕೊಂಡರು. ಬಿ.ವಿ. ಭೂಮರೆಡ್ಡಿ ಎಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ಬಿಡಿಕೆ ತರಬೇತಿ ನಡೆಯುತ್ತಿತ್ತು.

ವಾಸಸ್ಥಾನಕ್ಕಾಗಿ ಕ್ರೀಡಾಂಗಣದ ಸಿಬ್ಬಂದಿಯ ಪುಟ್ಟ ಕೋಣೆಯಲ್ಲಿಯೇ ಆಶ್ರಯ ಪಡೆದುಕೊಂಡಿದ್ದರು. ಮೈದಾನದ ಪಕ್ಕ ರುದ್ರಭೂಮಿ (ಸ್ಮಶಾನ) ಇತ್ತು. ಆಗ ಮೈದಾನ ಮತ್ತು ಸ್ಮಶಾನದ ನಡುವೆ ಕಾಂಪೌಂಡ್ ಕೂಡ ಇರಲಿಲ್ಲ.

ಜೂನಿಯರ್ ಹಂತದ ತಂಡಗಳಲ್ಲಿ ಆಲ್‌ರೌಂಡರ್ ಆಗಿ ಗುರುತಿಸಿಕೊಳ್ಳುವ ಹಾದಿಯಲ್ಲಿದ್ದರು. ಆದರೆ ಅದೇ ಸಂದರ್ಭದಲ್ಲಿ ರಘು ಅಪಘಾತವೊಂದರಲ್ಲಿ ಗಂಭೀರವಾಗಿ ಗಾಯಗೊಂಡರು. ಆಟದಿಂದಲೇ ದೂರ ಉಳಿಯಬೇಕಾಯಿತು. ಆಗ ಧಾರವಾಡ ವಲಯದ ಕೆಎಸ್‌ಸಿಎ ನಿಯಂತ್ರಕರಾಗಿದ್ದ ಬಾಬಾ ಭೂಸದ್, ಕೋಚ್ ಶಿವಾನಂದ್ ಗುಂಜಾಳ ಮತ್ತಿತರರು ರಘು ನೆರವಿಗೆ ನಿಂತರು. ಆದರೆ ಕ್ರಿಕೆಟಿಗನಾಗಿ ಬೆಳೆಯುವುದು ಸಾಧ್ಯವಿಲ್ಲ ಎಂದು ಗೊತ್ತಾದಾಗ ರಘು ಎದೆಗುಂದಲಿಲ್ಲ. ಕ್ರಿಕೆಟ್ ಪ್ರೀತಿಯನ್ನು ಬಿಡಲೂ ಇಲ್ಲ.

‘ರಘು ನಿಷ್ಕಲ್ಮಶ ಮನಸ್ಸಿನ ಹುಡುಗ. ಕ್ರಿಕೆಟ್ ಸಂಬಂಧಿಸಿದ ಯಾವುದೇ ಕೆಲಸವನ್ನೂ ಅಪಾರ ಶ್ರದ್ಧೆಯಿಂದ ಮಾಡಿದವರು. ಕಠಿಣ ಪರಿಶ್ರಮಿ. ಉತ್ತರ ಕನ್ನಡ ಜಿಲ್ಲೆಯ ನಾಗರಾಜ್, ಹುಬ್ಬಳ್ಳಿಯ ಜೆಜಿ ಕಾಮರ್ಸ್ ಕಾಲೇಜು, ಬಿವಿಬಿ ಕಾಲೇಜು ವಸತಿ ನಿಲಯಗಳವರು, ಬಿಡಿಕೆ ಕ್ರೀಡಾ ಪ್ರತಿಷ್ಠಾನದವರು, ಕೆನರಾ ಹೋಟೆಲ್ ಐತಾಳರು, ಗುರುದತ್ ಭವನ್ ಶೆಟ್ಟರು ಸೇರಿದಂತೆ ಬಹಳಷ್ಟು ಜನರು ರಘುವನ್ನು ಬೆಂಬಲಿಸಿದ್ದರು. ಅದಕ್ಕೆ ಕಾರಣ ರಘುವಿನ ಕಠಿಣ ಪರಿಶ್ರಮ ಮತ್ತು ಪ್ರಾಮಾಣಿಕತೆಯುಳ್ಳ ಸ್ವಭಾವ. ಇವತ್ತು ಅವರು ಈ ಮಟ್ಟಕ್ಕೆ ಬೆಳೆದಿರುವುದನ್ನು ನೋಡಲು ನಮಗೆಲ್ಲರಿಗೂ ಸಂತಸವಾಗುತ್ತದೆ’ ಎಂದು ಶಿವಾನಂದ್ ಗುಂಜಾಳ್ ಹೇಳುತ್ತಾರೆ.




ರಘು, ತರಬೇತಿ ಸಹಾಯಕನಾಗಿ ಕಾರ್ಯ ನಿರ್ವಹಿಸುವ ಮೂಲಕ ಕ್ರಿಕೆಟ್ ನಂಟು ಉಳಿಸಿಕೊಂಡರು. ಬೆಂಗಳೂರಿಗೆ ತೆರಳಿದ ಅವರು ಕೆಲವು ಅಕಾಡೆಮಿಗಳಲ್ಲಿ ಕಾರ್ಯನಿರ್ವಹಿಸಿದರು. 2010–11ರಲ್ಲಿ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಸಿಬ್ಬಂದಿಯಾಗಿ ಆಯ್ಕೆಯಾದರು. ಅದು ಅವರ ಜೀವನದ ಮಹತ್ವದ ತಿರುವು.

ಅಲ್ಲಿ 2012ರಲ್ಲಿ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಕಣ್ಣಿಗೆ ಬಿದ್ದ ರಾಘವೇಂದ್ರನ ಪಯಣ ಆರಂಭವಾಯಿತು. ಅಂದಿನಿಂದ ಇಂದಿನವರೆಗೂ ಭಾರತ ಕ್ರಿಕೆಟ್ ತಂಡದ ಅಚ್ಚುಮೆಚ್ಚಿನ ‘ರಘು’ ಆಗಿದ್ದಾರೆ. ರಾಹುಲ್ ದ್ರಾವಿಡ್, ಮಹೇಂದ್ರಸಿಂಗ್ ಧೋನಿ, ಚೇತೇಶ್ವರ್ ಪೂಜಾರ, ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ ಸೇರಿದಂತೆ ಎಲ್ಲರಿಗೂ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸಕ್ಕೆ ರಘು ಇರಲೇಬೇಕು.

‘ಈ ಮುಂಚೆ ಭಾರತ ತಂಡದಲ್ಲಿ ಮಸಾಜ್ ತಜ್ಞ ಮಾನೆ ಕಾಕಾ (ರಮೇಶ್) ದಶಕಕ್ಕೂ ಹೆಚ್ಚು ಕಾಲ ಕಾರ್ಯನಿರ್ವಹಿಸಿದ್ದರು. ಅವರೂ ಕೂಡ ಎಲ್ಲ ಆಟಗಾರರಿಗೆ ಅಚ್ಚುಮೆಚ್ಚಿನವರಾಗಿದ್ದರು. ಬಹುಶಃ ಅವರ ನಂತರ ತಂಡದಲ್ಲಿ ದೀರ್ಘ ಕಾಲ ಇರುವ ನೆರವು ಸಿಬ್ಬಂದಿ ರಘು’ ಎಂದು ಬಿಸಿಸಿಐನ ಕೆಲವು ಅಧಿಕಾರಿಗಳು ಹೇಳುತ್ತಾರೆ.

ರಘು ಕೂಡ ಅಷ್ಟೇ. ಅವರ ಶ್ರದ್ಧೆ, ಬದ್ಧತೆಗಳಲ್ಲಿ ಒಂಚೂರು ಕಡಿಮೆಯಾಗಿಲ್ಲ. ಬದಲಿಗೆ ದಿನದಿಂದ ದಿನಕ್ಕೆ ವಿನಮ್ರನಾಗಿಯೇ ಬೆಳೆಯುತ್ತಿದ್ದಾರೆ. ಕೇವಲ ಥ್ರೋಡೌನ್ ಕೆಲಸವಷ್ಟೇ ಅಲ್ಲ, ತಂಡದ ಎಲ್ಲ ವಿಭಾಗಗಳಲ್ಲಿಯೂ ರಘು ತಮ್ಮ ಅನುಭವ ಹಾಗೂ ಸೇವೆಯನ್ನು ಧಾರೆಯೆರೆಯುತ್ತಿದ್ದಾರೆ. ಆಟಗಾರರೊಂದಿಗೆ ಸ್ನೇಹ, ಸಲುಗೆಯನ್ನು ತಮ್ಮ ವೈಯಕ್ತಿಕ ಹಿತಾಸಕ್ತಿಗೆ ಬಳಸಿಕೊಂಡ ಉದಾಹರಣೆಗಳೇ ಇಲ್ಲ. ತಮ್ಮ ಕೆಲಸವನ್ನು ಸದ್ದಿಲ್ಲದೇ ಶ್ರದ್ಧೆಯಿಂದ ಮುಂದುವರಿಸಿದ್ದಾರೆ.

ಈಗ ಭಾರತದುದ್ದಕ್ಕೂ ಹಲವಾರು ಥ್ರೋಡೌನ್ ಪರಿಣತರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರೆಲ್ಲರೂ ಈ ಕಾರ್ಯವನ್ನು ಗೌರವದಿಂದ ಕೈಗೆತ್ತಿಕೊಂಡಿದ್ದರ ಹಿಂದೆ ರಘುವಿನ ಯಶಸ್ಸು ಕಾರಣವೆಂಬುದರಲ್ಲಿ ಅನುಮಾನವೇ ಇಲ್ಲ. ■


ಸಂಧಿಲಿನ್
SANDHILIN सन्धिलिन



ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ ಹೇಳಿ!




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ
- ‘ಸಂಧಿಲಿನ್’ ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM™ AYURVEDA PHARMACY

U.I.N:KA/044/2021

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಉಡುಪಿ–574 118, ಕರ್ನಾಟಕ.
Customer Care: +91 89709 77513
Email: sdmaph@sdmayurvedacollegeudupi.in
https://sdmayupharmacy.com
ISO 9001:22000 & GMP CERTIFIED